### ಪರಿಸರದ ಬಗ್ಗೆ ಕೊಂಚ ಯೋಚಿಸಿ

‘ಟಿಶ್ಯು ಗಂಭೀರ ಇಶ್ಯು’ (ಆ. 03, ಯು. ಶ್ರೀನಿವಾಸಮೂರ್ತಿ) ಪರಿಸರ ಕಾಳಜಿಯ ಲೇಖನ ಮಾಹಿತಿಪೂರ್ಣವಾಗಿದೆ. ಪ್ರಪಂಚದಾದ್ಯಂತ ಟಿಶ್ಯು ಪೇಪರಿನಷ್ಟೇ ಬಳಸಲ್ಪಡುತ್ತಿರುವ ಮತ್ತೊಂದು ಟಾಯ್ಲೆಟ್ ವಸ್ತು, ನ್ಯಾಪ್ಕೀ, ಡಯಾಪರ್ಸ್ ಮತ್ತು ಹೆಂಗಳೆಯರ ಸೇಫ್ಟಿ ಪ್ಯಾಡ್ಸ್ ಇವೆಲ್ಲವೂ ಪ್ಲಾಸ್ಟಿಕ್ ಮೂಲದ ವಸ್ತುಗಳು. ಇವುಗಳನ್ನು ಬಳಸಿದ ಬಳಿಕ ಎಲ್ಲೆಂದರಲ್ಲಿ ಗಂಟುಕಟ್ಟಿ ಬಿಸಾಡುತ್ತಾರೆ. ನೆಲದಲ್ಲಿ ಇವು ನೂರಾರು ವರ್ಷ ಕರಗದೆ ಮಾಲಿನ್ಯಕ್ಕೆ ಎಡೆಮಾಡುತ್ತವೆ.

—ಡಾ. ಎಸ್.ವಿ. ನರಸಿಂಹನ್

### ನಗೆ ತಂದ ಕಮ್ಲೂ ಪರದಾಟ

‘ಕಮ್ಲೂ ಆನ್‌ಲೈನ್ ಸರ್ಕಸ್’ (ಆ. 03, ವೈ.ಕೆ. ಸಂಧ್ಯಾಶರ್ಮ) ನಗೆ ಲೇಖನ ಚೆನ್ನಾಗಿದೆ. ಕಮ್ಲೂ, ಮೊಬೈಲ್ ಆ್ಯಪ್ ಮೂಲಕ ಆಹಾರ ಸಾಮಗ್ರಿಗೆ ಆರ್ಡರ್ ಮಾಡುವ ವಿಧಾನ, ಅದರಿಂದಾದ ಪರದಾಟ ಹಾಸ್ಯಭರಿತವಾಗಿದೆ.

—ಮಹೇಶ್ ಎಸ್.ಎಚ್., ಗದಗ

### ನಾನೊಬ್ಬ ಕಳ್ಳ

‘ಹೂ ಚೋರರು’ (ಜುಲೈ 27, ಲತಾ ಹೆಗಡೆ) ಮಂದಹಾಸ ಲೇಖನ ಓದಿದೆ. ನಾನೂ ಬೆಳಗಾಗೆದ್ದು ಅವರಿವರ ಮನೆ ಹೂಗಳನ್ನು ತಂದು ಪೂಜೆ ಮಾಡುತ್ತೇನೆ. ಕಾರಣವಿಷ್ಟೆ. ನಾನು ಪೂಜೆ ಮಾಡಿದರೂ ಹೂವು ದೇವರ ಮುಡಿ ಸೇರುತ್ತೆ. ಬೆಳೆದವರು ಪೂಜೆ ಮಾಡಿದರೂ ಅಷ್ಟೆ. ಕೆಲವರು ಹೂವಿನ ಅಂದ ಸವಿಯಲಿಕ್ಕೆ ಬಿಡುವುದೂ ಉಂಟು. ವಿಶೇಷವೆಂದರೆ, ಪುಣ್ಯಾತ್ಮರೊಬ್ಬರು ನನಗೆಂದೇ ಒಂದಷ್ಟು ಹೂಗಳನ್ನು ಮನೆ ಮುಂದಿನ ಕಾಂಪೌಂಡ್ ಮೇಲೆ ಇಡುತ್ತಿದ್ದರು.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ




### ಅರ್ಥಪೂರ್ಣ ಸಂಚಿಕೆ

‘ಹಬ್ಬಿದಾ ಮಲೆ ಮಧ್ಯದೊಳಗೆ’, ಅಂತರಾಷ್ಟ್ರೀಯ ಹುಲಿ ದಿನದ ವಿಶೇಷ ಸಂಚಿಕೆ ಸಕಾಲಿಕವಾಗಿದೆ. ಹುಲಿಗಳ ಕುರಿತು ಮಾಹಿತಿಯ ಹೂರಣದಂತಿದೆ.

ಹುಲಿಗಳ ಶಿಕಾರಿ ಅನಾದಿ ಕಾಲದಿಂದಲೂ ಇದೆ. ಕೊಂದ ಹುಲಿ ಮೇಲೆ ಕಾಲಿಟ್ಟು ಕೋವಿ ಹೆಗಲಿಗೇರಿಸಿ ಶೌರ್ಯ ಮೆರೆದ ಉದಾಹರಣೆಗಳಿವೆ. ಏಪ್ರಿಲ್ 1, 1973ರಂದು ವನ್ಯಜೀವಿ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದು ಹುಲಿಗಳ ಉಳಿವಿಗೆ ಕಾರಣರಾದ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರನ್ನು ಸ್ಮರಿಸಲೇಬೇಕು. ಆದರೆ ಮಹಾರಾಷ್ಟ್ರದ ‘ಅವನಿ’ಗೆ ನರಭಕ್ಷಕನೆಂದು ಗುಂಡಿಟ್ಟು ಕೊಂದಿದ್ದು ಅಮಾನವೀಯ. ಇದರೊಂದಿಗೆ, ನಮ್ಮ ಕರ್ನಾಟಕ, ಹುಲಿಗಳ ಸಂಖ್ಯೆಯಲ್ಲಿ ದೇಶದಲ್ಲಿ 2ನೇ ಸ್ಥಾನದಲ್ಲಿರುವುದು ಸಂತೋಷ. ಮಾನವ ಬದಲಾಗದಿದ್ದಲ್ಲಿ ಅಳಿವು ನಿಶ್ಚಿತ.

—ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

### ವ್ಯವಸ್ಥೆಯ ಪೈಶಾಚಿಕ ಕೃತ್ಯ

‘ವ್ಯಾಘ್ರನ ಹಾಡು’ (ಆ. 03, ಡಾ. ಉಮರ್ ಫಾರೂಕ್ ಮೀರಾನಾಯಕ) ಸಂಚಿಕೆಯಲ್ಲಿ, ‘ಅವನಿ’ಯ ಕರುಣಾಜನಕ ಕಥೆ ಓದಿ ಕಣ್ಣೀರು ಧಾರೆಯಾಯ್ತು. ಇದು ವ್ಯವಸ್ಥೆಯ ಪೈಶಾಚಿಕ ಕೃತ್ಯ. ಸುರಕ್ಷಿತವಾಗಿ ಹಿಡಿದು ವನ್ಯಜೀವಿ ಸಂರಕ್ಷಣಾ ವಲಯಕ್ಕೆ ಬಿಡಬಹುದಾಗಿದ್ದರೂ ‘ಅವನಿ’ಗೆ ಮರಣದಂಡನೆ ವಿಧಿಸಿದ ಅರಣ್ಯ ಕಾನೂನು ವ್ಯವಸ್ಥೆಗೆ ಏನು ಹೇಳುವುದು? ಅರಿವಿಗೆ ಬಾರದ ಇಂಥ ಘಟನೆಗಳು ಎಷ್ಟಿವೆಯೋ?.

—ಅನುಪಮಾ ಕುಲಕರ್ಣಿ, ಧಾರವಾಡ

### ಮನುಷ್ಯನ ಸ್ವಾರ್ಥಕ್ಕೆ ಕನ್ನಡಿ

ವ್ಯಾಘ್ರ ವಿಶೇಷ ಲೇಖನ ನಮ್ಮ ಮೇಲೆಯೇ ನಮಗೆ ಬೇಸರ ತರಿಸಿತು. ಮನುಷ್ಯನ ಸ್ವಾರ್ಥಕ್ಕೆ, ವ್ಯವಸ್ಥೆಯ ಕುರುಡುತನಕ್ಕೆ ಸಾಕ್ಷಿಯಂತಿದೆ. ‘ಅವನಿ’ಯ ಸಾವಿನಿಂದ ಸಮಾಜ ಪಾಠ ಕಲಿಯದೇ ಹೋದರೆ ನಿಸರ್ಗವೇ ನಮಗೆ ಪಾಠ ಕಲಿಸದೆ ಬಿಡುವುದಿಲ್ಲ. ಅರ್ಥಪೂರ್ಣ ಲೇಖನ.

—ರಮೇಶ ಗಬ್ಬೂರ್, ಗಂಗಾವತಿ

### ಸೊಗಸಾದ ಚಿತ್ರಗಳು

ಹುಲಿಯ ಬಗ್ಗೆ ‘ವ್ಯಾಘ್ರ ವಿಶೇಷ’ ಸಂಚಿಕೆಯಲ್ಲಿನ ಮೂರೂ ಲೇಖನಗಳು ಹುಲಿಯ ಬಗ್ಗೆ ವಿಪುಲ ಮಾಹಿತಿ ನೀಡಿವೆ. ಹುಲಿಯ ಚಿತ್ರಗಳು ತುಂಬಾ ಸೊಗಸಾಗಿವೆ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

### ಗಂಭೀರ ಚಿಂತನೆಗೆ ದೂಡಿತು

‘ವ್ಯಾಘ್ರ ವಿಶೇಷ’ ಸಂಚಿಕೆ, ಹುಲಿಗಳ ಕುರಿತು ಗಂಭೀರವಾಗಿ ಚಿಂತಿಸುವಂತೆ ಮಾಡಿತು. ದೇಶದ ಹಲವು ವಿಶೇಷ ಹುಲಿಗಳ ಪರಿಚಯ ಮಾಡಿಕೊಟ್ಟಿತು. ಹುಲಿಯ ಚಿತ್ರಗಳು ಕೂಡ ಸುಂದರವಾಗಿ ಮೂಡಿಬಂದಿವೆ.

—ಖಂಡಪರಶು ಮಾಗಡಿ

### ಹುಲಿಯ ರೋಚಕ ಕಥೆಗಳು

‘ಹೆಣ್ ಮಕ್ಳೇ ಸ್ಟ್ರಾಂಗು!’ (ಆ. 03, ಕಲೀಮ್ ಉಲ್ಲಾ) ಲೇಖನ ತುಂಬಾ ಚೆನ್ನಾಗಿದೆ. ಹುಲಿಗಳ ಬಗ್ಗೆ ತಿಳಿಯದ ಅನೇಕ ವಿಷಯಗಳನ್ನು ಲೇಖನ ತಿಳಿಸಿಕೊಟ್ಟಿತು. ಹುಲಿಗಳ ಜೀವನಕ್ರಮ, ತಾಯಿ ಪ್ರೀತಿ, ವಿಶೇಷ ನಡವಳಿಕೆಯಿಂದ ಗಮನಸೆಳೆದ ಹುಲಿಗಳ ಕಥೆಗಳು ರೋಚಕವೆನಿಸಿದವು.

—ಪ್ರದೀಪ್ ಬಂಟಗನಹಳ್ಳಿ



### ಹುಲಿಯ ತ್ಯಾಗ ವ್ಯರ್ಥವಾಗಲಿಲ್ಲ

‘ಮೆಚ್ಚನಾ ಪರಮಾತ್ಮನು’ (ಆ. 03, ಗೋವಿಂದರಾಜು ಎಂ. ಕಲ್ಲೂರು) ಕಥೆ ಬಹಳ ಅಗತ್ಯವಿತ್ತು. ನಾನು ಸುಮಾರು ವರ್ಷಗಳಿಂದ ಯೋಚಿಸುತ್ತಿದ್ದೆ, ಹುಲಿಯ ತ್ಯಾಗ ವ್ಯರ್ಥವಾಯಿತೇ ಎಂದು. ಒಂದು ಉತ್ತಮ ಕಥೆ.

—ಭಂಡಿವಾಡ ಡಿ

### ಇಂದಿನ ಸಮಾಜದ ಕಥೆ

ಬಾಲ್ಯದಲ್ಲಿ ಓದಿದ್ದ ಪುಣ್ಯಕೋಟಿ ಕಥೆಯ ಮುಂದಿನ ಭಾಗದ ಚಿತ್ರಣವನ್ನು ಭಾರತೀಯ ಸಂಸ್ಕೃತಿಯಲ್ಲಿನ ಮೌಲ್ಯ ಮತ್ತು ಇಂದಿನ ಸಮಾಜದ ಹಿನ್ನೆಲೆಯಲ್ಲಿ ನೀಡಿರುವುದು ಅಭಿನಂದನೀಯ.

—ಸತ್ಯವತಿ, ಕುಳಿಹಿತ್ಲು

### ಬಾಲ್ಯದ ಕಥೆ ಚೆನ್ನಾಗಿತ್ತು

ಕಥೆ ಓದಿ ನನ್ನ ಬಾಲ್ಯದ ದಿನಗಳಿಗೆ ಹೋದೆ. ಮನಸಿನಲ್ಲಿ ಅಚ್ಚೊತ್ತಿರುವ ಕಥೆ ಇದ್ದಕ್ಕಿದ್ದ ಹಾಗೆ ಬದಲಾದದ್ದು ಓದಿ, ನಮ್ಮ ಮಿಸ್ ಸ್ಕೂಲ್‌ನಲ್ಲಿ ಹೇಳಿದ್ದ, ‘ಕಠೋರ ವ್ಯಕ್ತಿ ಅನಿಸಿಕೊಂಡವರಲ್ಲೂ ಮಾನವೀಯತೆ ಇರುತ್ತೆ’ ಎಂಬ ನೀತಿಪಾಠವೇ ಚೆನ್ನಾಗಿತ್ತು ಅನಿಸಿತು.

— ವಿಜಯರಾವ್, ಬೆಂಗಳೂರು

### ಮಕ್ಕಳಿಗೆ ಅರ್ಬುದನೂ ತಿಳಿಯಲಿ

ಕಥೆಯಲ್ಲಿ ಹುಲಿಯನ್ನು ಬಿಂಬಿಸಿರುವ ರೀತಿ ಚೆನ್ನಾಗಿದೆ. ಪುಣ್ಯಕೋಟಿ ಬಗ್ಗೆಯಷ್ಟೇ ತಿಳಿದಿದ್ದ ಮಕ್ಕಳಿಗೆ ಹುಲಿಯ ತ್ಯಾಗವೂ ತಿಳಿಯಬೇಕಿದೆ.

—ಯಶೋಧ ನಾಗರಾಜ್, ಹುಬ್ಬಳ್ಳಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in